ಶಾಂತಲಿಂಗಪ್ಪನವರು ಆಫೀಸ್ ರೂಮಿನಲ್ಲಿಯೇ ಕೆಟ್ಟದಾಗಿ ಬಯ್ದಿದ್ದನ್ನು ಬರೆದಿದ್ದಾರೆ. ಅದಕ್ಕೆ ಕಾರಣ ಅಪ್ಪನವರ ಮೇಲೇನೇ ಸುಳ್ಳು ಲೈಂಗಿಕ ಕಿರುಕುಳದ ಆರೋಪ ಮಾಡಿದ್ದು. ಪತ್ರಿಕೆಯಲ್ಲಿ ಬಂದದ್ದು ಅಪ್ಪನವರ ಸಿಟ್ಟು ನೆತ್ತಿಗೇರಿತ್ತಂತ ಕಾಣ್ತದ...'

'ಆಕೆಗೆ ಬುದ್ಧಿವಾದ ಹೇಳಿ ವರ್ಗಾವಣೆ ಮಾಡಿಸಿದರು - ಎಂದು ತಿದ್ದುಪಡಿ ಮಾಡಿದರೆ ಸಾಕು'.

'ಆಯ್ತು ಮೇಡಮ್. ಆಕೆಯನ್ನು ಬಳಸಿದ ಉಪನ್ಯಾಸಕರ ಹೆಸರುಗಳೂ ಇವೆ. ಅಟೆಂಡರ್ ಮಹಿಳೆ ಹೆಸರು ಹಾಗೆ ಇದೆ'.

'ತಿದ್ದುಪಡಿ ಮಾಡು. ಹೆಸರು ತೆಗೆದು ಬಿಡು' ಎಂದು ಹೇಳಿದ್ದು. ಎಲ್ಲ ನೆನಪಿಗೆ ಬರತೊಡಗಿದ್ದವು.

4

ರಾತ್ರಿ ಒಂಬತ್ತರ ಮೇಲಾಗಿತ್ತು. ಅಡುಗೆ ಮಾಡಿಕೊಳ್ಳುವ ಗೋಜಿಗೆ ಹೋಗದೆ ಹಣ್ಣು, ಹಾಲಿನ ಮೇಲೆ ರಾತ್ರಿ ಕಳೆಯಲು ನಿರ್ಧರಿಸಿದಳು. ಗುರುರಾಜ ಆತ್ಮಚರಿತ್ರೆಯನ್ನು ತಿದ್ದುಪಡಿ ಮಾಡುವುದನ್ನು ವರ್ಷ ಕಾಲ ಮಾಡುತ್ತ ಸಮರ್ಥವಾಗಿ ನಿಭಾಯಿಸಿದ್ದ. ಗುರುರಾಜನಿಗೆ ಕೊಡದೆ ತಾನೇ ತಿದ್ದುಪಡಿ ಮಾಡುವುದಾಗಿ ಉಳಿಸಿಕೊಂಡ ಭಾಗಗಳನ್ನು ನಿಭಾಯಿಸುವುದು ಅಸಾಧ್ಯವಾಗಿ ಕಂಡಿತು. ಅದರಲ್ಲಿ ಅಪ್ಪ ತನ್ನ ಬದುಕಿನ ಬಗ್ಗೆ ಬರೆದದ್ದನ್ನು ಓದಿ ಬೆವತು ಹೋಗಿದ್ದಳು! ಅದನ್ನು ತಿದ್ದಿದರೆ ಸತ್ಯದ ಮೇಲೆ ಮಣ್ಣು ಎಳೆದಂತಾಗುತ್ತಿತ್ತು. ಬಿಟ್ಟರೆ ತನ್ನನ್ನು ಸಮಾಜ ನೋಡುವ ರೀತಿಯನ್ನು ಸಹಿಸಿಕೊಳ್ಳಬೇಕು! ತಿದ್ದುವುದೋ, ಹಾಗೆ ಬಿಡುವುದೋ ಎಂದು ಚಿಂತಿಸುತ್ತಲೇ ಆರು ತಿಂಗಳು ಕಳೆದಿದ್ದಳು. ಆತ್ಮಚರಿತ್ರೆಯಲ್ಲಿ ತನ್ನ ಪ್ರವೇಶವಾಗಿ ಅಪ್ಪ ಬರೆದದ್ದನ್ನು ಓದುತ್ತಲೇ ಬೆವತು ಸುಸ್ತಾಗಿ ಕುಸಿದು ಬಿಡುತ್ತಿದ್ದಳು. ಮುಂದೆ ಇನ್ನೊಂದು ಭಾಗವಿತ್ತು. ಅದನ್ನು ಓದುವುದಕ್ಕೆ ಸಾಧ್ಯವಾಗಿರಲಿಲ್ಲ. ಯಾಕೆಂದರೆ, ತನ್ನ ಬಗ್ಗೆ ಅಪ್ಪನಿಗಿದ್ದ ಅಭಿಪ್ರಾಯ ಓದಿಯೇ ಉಸಿರು ನಿಂತು ಹೋದಂತಾಗುತ್ತಿತ್ತು!

ನನ್ನ ಸರ್ಕಾರಿ ಪದವಿ ಕಾಲೇಜಿನಲ್ಲಿ ಉಪನ್ಯಾಸಕಿಯಾಗಿ ಕೆಲ್ಸ ಸಿಕ್ಕ ಮ್ಯಾಲೆ ಆರಂಭದಾಗ ನಾಲ್ಕು ವರ್ಷ ಅಪ್ಪನಿಂದ-ಅಮ್ಮನಿಂದ ಬೇರೆ ಇರುವುದು ಬಂತು. ಅಪ್ಪನಿದ್ದ ತಾಲ್ಲೂಕು ಕೇಂದ್ರದಿಂದ ನೂರು ಕಿಮೀ. ದೂರವಿದ್ದ ಇನ್ನೊಂದು



ತಾಲ್ಲೂಕು ಕೇಂದ್ರದ ಕಾಲೇಜಿನಲ್ಲಿ ನನ್ನ ಪೋಸ್ಟಿಂಗ್ ಆಗಿತ್ತು. ಅಪ್ಪನ ಪರಿಚಯಸ್ಥರೊಬ್ಬರು ಶಿಕ್ಷಣ ಇಲಾಖೆಯಲ್ಲಿದ್ದರು. ಅವರ ಪರಿಚಯ ನನ್ನ ಇರ್ಲಿಲ್ಲ. ಅವರ ಹೆಸರು ಮತ್ತು ಅಪ್ಪನ ಆಪ್ತರು ಎಂದು ತಿಳಿದಿತ್ತು. ವರ್ಗಾವಣೆ ಮಾಡಿಸುವುದಾದರೆ ಅವರಿಂದ ಸಾಧ್ಯ ಎಂದು ತಿಳಿದಿತ್ತು. ಅಪ್ಪನಿಗೆ ಹೇಳಿದ್ರೆ 'ಎಲ್ಲಿ ಪೋಸ್ಟಿಂಗ್ ಆಗ್ತದೋ ಅಲ್ಲೇ ಕೆಲ್ಸ ಮಾಡೋದನ್ನ ನೌಕರರು ಕಲಿಬೇಕು. ದರಿದ್ರ ನೌಕರರು ಲಂಚ ಕೊಟ್ಟು ವರ್ಗಾವಣೆ ಮಾಡಿಸಿಕೊಳ್ತಾರ' ಎಂದು ಬಯ್ದರು. ಆದರೂ ನಾನು ಆಗಾಗ ಹೇಳುತ್ತಿದ್ದೆ. ಅಪ್ಪ ಕೇಳಿಸಿಕೊಳ್ಳುತ್ತಿರಲಿಲ್ಲ. ಅಮ್ಮನ ಕಡೆಯಿಂದ ಹೇಳಿಸಬೇಕೆಂದ್ರ ಆಕೆಗೆ ಇದು ತಿಳಿಯುತ್ತಿರಲಿಲ್ಲ. ನಾಲ್ಕು ವರ್ಷ ಕಳೆದವು. ಅಮ್ಮ ನನ್ನ ಮದುವೆ ವಿಷಯ ಎತ್ತುತ್ತಿದ್ದಳು. ಒಮ್ಮೆ ಧೈರ್ಯ ಮಾಡಿ ನಾನೇ ಶಿಕ್ಷಣ ಇಲಾಖೆಯಲ್ಲಿದ್ದ ಅಪ್ಪನ ಆಪ್ತರನ್ನು ಕಂಡು ವಿಷಯ ತಿಳಿಸಿದೆ. 'ಅಪ್ಪ ಇಂಥದ್ದಕ್ಕೆ ಗಮನಕೊಡಲ್ಲ ಸರ್' ಎಂದು ಹೇಳಿ ಬಂದಿದ್ದೆ. ಆರು ತಿಂಗಳ ಕಳೆದ ಮ್ಯಾಲೆ ಮತ್ತೊಮ್ಮೆ